ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2014–15 ದಿನಾಂಕ: 13–10–2015

# ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ / ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| **1.** | ಇನ್‌ವೆಸ್ಟ್ ಕರ್ನಾಟಕ – **2016** – ಕರ್ಟನ್ ರೈಸರ್ ಮತ್ತು ಲಾಂಛನ ಅನಾವರಣೆ.<br><br>ಉದ್ಘಾಟನೆ:<br><br>ಸಿದ್ದರಾಮಯ್ಯ<br>ಮುಖ್ಯಮಂತ್ರಿಗಳು,<br>ಕರ್ನಾಟಕ ಸರ್ಕಾರ<br><br>ಅಧ್ಯಕ್ಷತೆ:<br><br>ಆರ್.ವಿ. ದೇಶಪಾಂಡೆ,<br><br>ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಹಾಗೂ ಪ್ರವಾಸೋದ್ಯಮ ಸಚಿವರು.<br><br>ಮುಖ್ಯ ಅತಿಥಿಗಳು<br><br>ರಾಮಲಿಂಗಾ ರೆಡ್ಡಿ,<br>ಸಾರಿಗೆ ಸಚಿವರು. | **14–10–2015**<br><br>ಬುಧವಾರ<br><br>ಸಂಜೆ<br>**6–00** ಗಂಟೆಗೆ | ದಿ ಲಲಿತ ಅಶೋಕ್,<br>ಕಾಳಿಂಗ ಹಾಲ್, ಹೈಗ್ರೌಂಡ್ಸ್,<br>ಬೆಂಗಳೂರು |

| | | | |
|---|---|---|---|
| | ಸತೀಶ್ ಜಾರಕಿಹೊಳಿ,<br>ಸಣ್ಣ ಕೈಗಾರಿಕಾ ಸಚಿವರು.<br><br>ಆರ್. ರೋಷನ್ ಬೇಗ್,<br><br>ಮೂಲಸೌಲಭ್ಯ ಅಭಿವೃದ್ಧಿ, ವಾರ್ತಾ ಸಾರ್ವಜನಿಕ ಸಂಪರ್ಕ ಹಾಗೂ ಹಜ್ ಖಾತೆ ಸಚಿವರು. | | |

ನಿರ್ದೇಶಕರ ಪರವಾಗಿ

# ಪತ್ರಿಕಾ ಪ್ರಕಟಣೆ

## ಈ ವಾರದ ಬೆಳ್ಳಿಸಿನಿಮಾ-ಬೆಳ್ಳಿಮಾತು:
## " ಚಿತ್ರಮಂದಿರದಲ್ಲಿ" ಚಲನಚಿತ್ರ ಪ್ರದರ್ಶನ, ಸಂವಾದ

ಬೆಂಗಳೂರು, ಅಕ್ಟೋಬರ್ 13 (ಕರ್ನಾಟಕ ವಾರ್ತೆ)

ಕರ್ನಾಟಕ ಚಲನಚಿತ್ರ ಅಕಾಡೆಮಿಯು ಪ್ರತಿ ಶನಿವಾರ ನಡೆಸುವ ಬೆಳ್ಳಿಸಿನಿಮಾ-ಬೆಳ್ಳಿಮಾತು ಕಾರ್ಯಕ್ರಮದಡಿ ಅಕ್ಟೋಬರ್ 17 ರ ಶನಿವಾರದಂದು ಬೆಳ್ಳಿ ಸಿನಿಮಾ " ಚಿತ್ರಮಂದಿರದಲ್ಲಿ " ಚಲನಚಿತ್ರ ಪ್ರದರ್ಶನವನ್ನು ಏರ್ಪಡಿಸಿದೆ. ಈ ಚಿತ್ರದ ನಿರ್ದೇಶಕ ವಿ. ಚಲ ಅವರಿಂದ ಬೆಳ್ಳಿಮಾತು ಸಂವಾದ ಕಾರ್ಯಕ್ರಮ ನಡೆಯಲಿದೆ ಎಂದು ಅಕಾಡೆಮಿಯ ರಿಜಿಸ್ಟ್ರಾರ್ ಹೆಚ್. ಬಿ. ದಿನೇಶ್ ಅವರು ತಿಳಿಸಿದ್ದಾರೆ.

ಬೆಂಗಳೂರು ಮಿಲ್ಲರ್ಸ್ ರಸ್ತೆಯ ಚಾಮುಂಡೇಶ್ವರಿ ಸ್ಟುಡಿಯೋದಲ್ಲಿ ಅಕ್ಟೋಬರ್ 17 ರಂದು ಸಂಜೆ 4-00 ಗಂಟೆಗೆ ನಡೆಯುವ ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕರ್ನಾಟಕ ಚಲನಚಿತ್ರ ಅಕಾಡೆಮಿಯ ಅಧ್ಯಕ್ಷ ಎಸ್. ವಿ. ರಾಜೇಂದ್ರ ಸಿಂಗ್ ಬಾಬು ಅವರು ವಹಿಸುವರು. ಪತ್ರಕರ್ತ ಪಿ. ಗಣಪತಿ, ಚಿತ್ರ ನಟಿ ಶ್ರೀಮತಿ ನಮಿತಾರಾವ್ ಪಾಲ್ಗೊಳ್ಳುವರು ಎಂದು ಹೆಚ್. ಬಿ. ದಿನೇಶ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹೆಚ್‌ಬಿಡಿ:ಬಾಬು:ಜಿಪಿಆರ್.

# ರಫ್ತು ನಿರ್ವಹಣಾ ತರಬೇತಿ

ಬೆಂಗಳೂರು, ಅಕ್ಟೋಬರ್ 13 (ಕರ್ನಾಟಕ ವಾರ್ತೆ)

ವಿಶ್ವೇಶ್ವರಯ್ಯ ವ್ಯಾಪಾರ ಉತ್ತೇಜನ ಕೇಂದ್ರವು ರಾಜ್ಯದ ರಫ್ತು ಸಾಮರ್ಥ್ಯವನ್ನು ಹೆಚ್ಚಿಸುವ ಕುರಿತು ಆರು ದಿನಗಳ ರಫ್ತು ನಿರ್ವಹಣಾ ತರಬೇತಿ ಕಾರ್ಯಕ್ರಮವನ್ನು ನವೆಂಬರ್ 2 ರಿಂದ 7 ರವರಗೆ ಬೆಂಗಳೂರಿನಲ್ಲಿ ಆಯೋಜಿಸಿದೆ.

ಕೈಗಾರಿಕೋದ್ಯಮಿಗಳಿಗೆ ಮತ್ತು ಭಾವಿ ರಫ್ತು ಕ್ಷೇತ್ರಕ್ಕೆ ಪ್ರವೇಶಿಸುವವರಿಗೆ ಪ್ರೋತ್ಸಾಹಿಸುವ ಮೂಲಕ ರಾಜ್ಯದ ರಫ್ತು ಸಾಮರ್ಥ್ಯವನ್ನು ಹೆಚ್ಚಿಸುವ ದೃಷ್ಠಿಯಿಂದ ಈ ಕಾರ್ಯಕ್ರಮ ಹಮ್ಮಿಕೊಂಡಿದೆ.

ರಫ್ತು ವ್ಯಾಪಾರವನ್ನು ಆರಂಭಿಸಲು ಆಸಕ್ತಿಯುಳ್ಳ ಕೈಗಾರಿಕೋದ್ಯಮಿಗಳು/ಭಾವಿ ರಫ್ತುದಾರರು ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಲು ವಿ.ಟಿ.ಪಿ.ಸಿ. ಟ್ರೈನಿಂಗ್ ಕಚೇರಿಯಲ್ಲಿ ನೊಂದಣೆಯನ್ನು ಮಾಡಿಸಬೇಕು. ವಿ.ಟಿ.ಪಿ.ಸಿ. ಟ್ರೈನಿಂಗ್ ಹಾಲ್. ಬಿ.ಎಂ.ಟಿ.ಸಿ. ಕಟ್ಟಡ, 'ಎ' ಬ್ಲಾಕ್, 3ನೇ ಮಹಡಿ, ಕೆ.ಹೆಚ್. ರಸ್ತೆ, ಶಾಂತಿನಗರ, ಬೆಂಗಳೂರು ಇಲ್ಲಿ ತರಬೇತಿಯನ್ನು ನಡೆಸಲಾಗುವುದು.

ಹೆಚ್ಚಿನ ವಿವರಗಳಿಗಾಗಿ ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಕೈಗಾರಿಕಾ ಉತ್ತೇಜನ ಕೇಂದ್ರ, ಬಿ.ಎಂ.ಟಿ.ಸಿ. ಕಟ್ಟಡ, 'ಎ' ಬ್ಲಾಕ್, 3ನೇಮಹಡಿ, ಕೆ.ಹೆಚ್. ರಸ್ತೆ, ಶಾಂತಿನಗರ, ಬೆಂಗಳೂರು – 560 027 ದೂರವಾಣಿ 080–22230853/22210633, ಫ್ಯಾಕ್ಸ್ : 22860853, ಇ ಮೇಲ್ md@vtpckarnataka.gov.in ವೆಬ್‌ಸೈಟ್ www.vtpckarnataka.gov.in. ಅನ್ನು ಸಂಪರ್ಕಿಸಬಹುದು.

ಪಲ್ಲವಿ:ಬಾಬು:ಜಿಪಿಆರ್.

# ಪ್ರೌಢಶಾಲೆ ಶಿಕ್ಷಕರ ಆಯ್ಕೆಪಟ್ಟಿ ಇನ್ನೆರಡು ದಿನಗಳಲ್ಲಿ ಬಿಡುಗಡೆ

## – ಕಿಮ್ಮನೆ ರತ್ನಾಕರ

ಬೆಂಗಳೂರು, ಅಕ್ಟೋಬರ್ 13 (ಕರ್ನಾಟಕ ವಾರ್ತೆ)

**ಪ್ರೌಢಶಾಲೆ ಶಿಕ್ಷಕರ ನೇಮಕಾತಿ ಆಯ್ಕೆ ಪಟ್ಟಿಯನ್ನು ಇನ್ನೆರಡು ದಿನಗಳಲ್ಲಿ ಪ್ರಕಟಿಸಲಾಗುವುದು ಎಂದು ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವ ಕಿಮ್ಮನೆ ರತ್ನಾಕರ್ ಅವರು ತಿಳಿಸಿದರು.**

**ವಿಧಾನಸೌಧದ ಕಚೇರಿಯಲ್ಲಿ ಇಂದು ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವರು ಪ್ರೌಢ ಶಾಲೆಯ 1130 ಶಿಕ್ಷಕರ ಹುದ್ದೆಗೆ ನಡೆದ ಆಯ್ಕೆ ಪ್ರಕ್ರಿಯೆ ಪೂರ್ಣಗೊಂಡಿದ್ದು, ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗುವುದು ಹಾಗೆಯೇ ಪ್ರಾಥಮಿಕ ಶಾಲೆಯ ಶಿಕ್ಷಕರ 9511 ಹುದ್ದೆಗಳಿಗೆ ನಡೆಸಲಾಗಿದ್ದ ಆಯ್ಕೆ ಪ್ರಕ್ರಿಯೆ ಅಂತಿಮ ಹಂತದಲ್ಲಿದ್ದು 9511 ಹುದ್ದೆಗಳ ಆಯ್ಕೆಪಟ್ಟಿಯನ್ನು ಸದ್ಯದಲ್ಲೇ ಬಿಡುಗಡೆ ಮಾಡಲಾಗುವುದು ಎಂದರು.**

**ಇಲಾಖೆಯಲ್ಲಿ ಖಾಲಿ ಉಳಿದಿರುವ ಸುಮಾರು 25 ಸಾವಿರ ಶಿಕ್ಷಕರ ಹುದ್ದೆಗಳನ್ನು ಎರಡು ಹಂತಗಳಲ್ಲಿ ಭರ್ತಿಮಾಡಲಾಗುವುದು ಎಂದು ತಿಳಿಸಿದ ಕಿಮ್ಮನೆ ರತ್ನಾಕರ್ ಅವರು ಮುಂದಿನ ಶೈಕ್ಷಣಿಕ ವರ್ಷದಿಂದ ಪ್ರೌಢಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಉಚಿತ ಶೂಗಳನ್ನು ವಿತರಿಸಲು ಚಿಂತಿಸಲಾಗಿದ್ದು, ಈ ಬಗ್ಗೆ ಅಧಿಕಾರಿಗಳೊಂದಿಗೆ ಈಗಾಗಲೇ ಚರ್ಚಿಸಲಾಗಿದೆ ಎಂದರು.**

**ಶಿಕ್ಷಣ ಹಕ್ಕು ಕಾಯ್ದೆ (ಆರ್.ಟಿ.ಇ) ಯಡಿ ಖಾಸಗಿ ಶಾಲೆಗಳಲ್ಲಿ ಇನ್ನೂ ಸೀಟು ಪಡೆಯಲು ಇನ್ನು ಮುಂದೆ ಬಿ.ಪಿ.ಎಲ್ ಕಾರ್ಡುಗಳನ್ನು ಕಡ್ಡಾಯಗೊಳಿಸಲು ಚಿಂತಿಸಲಾಗಿದೆ ಎಂದು ಇದೇ ಸಂದರ್ಭದಲ್ಲಿ ಕಿಮ್ಮನೆ ರತ್ನಾಕರ್ ಅವರು ತಿಳಿಸಿದರು.**

**ಪಲ್ಲವಿ:ಬಾಬು:ಜಿಪಿಆರ್.**

## ಔಷಧ ಅಂಗಡಿ ಬಂದ್: ಲಭ್ಯತೆಗೆ ಕ್ರಮ

**ಬೆಂಗಳೂರು, ಅಕ್ಟೋಬರ್ 13 (ಕರ್ನಾಟಕ ವಾರ್ತೆ)**

ಆನ್‍ಲೈನ್ ಮೂಲಕ ಔಷಧ ಮಾರಾಟಕ್ಕೆ ಸಮ್ಮತಿಯನ್ನು ನೀಡಲು ಕೇಂದ್ರ ಸರ್ಕಾರ ಮುಂದಾಗಿರುವುದನ್ನು ವಿರೋಧಿಸಿ ಅಖಿಲ ಭಾರತ ಔಷಧ ವ್ಯಾಪಾರಿಗಳ ಸಂಘ (ಎಐಓಸಿಡಿ) ಮುಷ್ಕರಕ್ಕೆ ಕರೆ ನೀಡಿದ್ದು, ಅದಕ್ಕೆ ಕರ್ನಾಟಕ ಕೆಮಿಸ್ಟ್ಸ್ ಅಂಡ್ ಡ್ರಗ್ಗಿಸ್ಟ್ಸ್ ಅಸೋಸಿಯೇಷನ್ ಬೆಂಬಲಿಸಿ ರಾಜ್ಯದ ಔಷಧ ಅಂಗಡಿಗಳನ್ನು ಅಕ್ಟೋಬರ್ 14 ರಂದು 24 ಗಂಟೆ ಬಂದ್ ಮಾಡುವ ಮೂಲಕ ಮುಷ್ಕರದಲ್ಲಿ ಭಾಗವಹಿಸಲಿದ್ದಾರೆಂದು ತಿಳಿಸಿದ್ದಾರೆ. ಈ ನಿಟ್ಟಿನಲ್ಲಿ ರಾಜ್ಯದಲ್ಲಿ ಖಾಸಗಿ ಆಸ್ಪತ್ರೆಗಳಲ್ಲಿ, ನರ್ಸಿಂಗ್ ಹೋಂಗಳಲ್ಲಿ, ಕಾರ್ಪೊರೇಟ್ ಆಸ್ಪತ್ರೆಗಳಲ್ಲಿರುವ ಔಷಧ ಅಂಗಡಿಗಳು ಬಂದ್‍ನಿಂದ ವಿನಾಯಿತಿ ಹೊಂದಿದ್ದು, ತೆರೆದಿರುತ್ತವೆ. ಚೈನ್ ಮೆಡಿಕಲ್ ಸ್ಟೋರ್‍ಗಳು ಅಕ್ಟೋಬರ್ 14 ರಂದು ಎಂದಿನಂತೆ ತೆರೆದಿರುತ್ತವೆ. ಸಾರ್ವಜನಿಕರು ಔಷಧಗಳಿಗಾಗಿ ಈ ಔಷಧಿ ಅಂಗಡಿಗಳನ್ನು ಸಂಪರ್ಕಿಸಬಹುದು.

ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿರುವ ಸಹಾಯಕ ಔಷಧ ನಿಯಂತ್ರಕರುಗಳಿಗೆ ಔಷಧಗಳ ಲಭ್ಯತೆ ಬಗ್ಗೆ ಸೂಕ್ತ ಕ್ರಮ ಜರುಗಿಸಲು ಸೂಚಿಸಲಾಗಿದೆ. ಸಾರ್ವಜನಿಕರು ಔಷಧಗಳ ಲಭ್ಯತೆಗಾಗಿ ಹತ್ತಿರದ ಆಯಾ ಜಿಲ್ಲೆಯ ಸಹಾಯಕ ಔಷಧ ನಿಯಂತ್ರಕರನ್ನು ಸಂಪರ್ಕಿಸಲು ಕೋರಲಾಗಿದೆ. ಎಲ್ಲಾ

ಸಹಾಯಕ ಔಷಧ ನಿಯಂತ್ರಕರ ದೂರವಾಣಿ ಸಂಖ್ಯೆಗಳು ಇಲಾಖೆಯ ವೆಬ್‌ಸೈಟ್ www.drugs.kar.nic.inನಲ್ಲಿ ಲಭ್ಯವಿರುತ್ತವೆ.

ಔಷಧಗಳ ಲಭ್ಯತೆ ಕುರಿತು ಮಾಹಿತಿ ನೀಡಲು ಶ್ರೀ ಕೆಂಪಯ್ಯ ಸುರೇಶ್, ಸಹಾಯಕ ಔಷಧ ನಿಯಂತ್ರಕರು, ಬೆಂಗಳೂರು ವೃತ್ತ-4ರವರನ್ನು 'ನೋಡಲ್‌ಅಧಿಕಾರಿ'ಯನ್ನಾಗಿ ನೇಮಕ ಮಾಡಲಾಗಿದೆ. ಸಾರ್ವಜನಿಕರು ದೂರವಾಣಿ ಸಂಖ್ಯೆ: 9449197852, ಕಛೇರಿ ದೂರವಾಣಿ ಸಂಖ್ಯೆ: 080–22264760 Ext. No. 101ನ್ನು ಸಂಪರ್ಕಿಸಲು ಕೋರಿದೆ. **ಸಾರ್ವಜನಿಕರು ಔಷಧಗಳ ಲಭ್ಯತೆ ಬಗ್ಗೆ ಆತಂಕ ಪಡುವ ಅವಶ್ಯಕತೆ ಇಲ್ಲ ಎಂದು ಔಷಧ ನಿಯಂತ್ರಣ ಇಲಾಖೆಯ ಪ್ರಕಟಣೆ ತಿಳಿಸಿದೆ.**

**ಪಲ್ಲವಿ/ಬಾಬು/ಕೆಎಂ**